## ಇಲ್ಲೇ ನೆಗೆದು ಬಿದ್ರೆ ಸಿಗುತ್ತೆ

ವಿದೇಶದಲ್ಲಿಯೇ ಹುಟ್ಟಿ–ಬೆಳೆದ ಮಧು ಇತ್ತೀಚೆಗೆ ಅಜ್ಜಿಯ ಮನೆಗೆ ಬಂದು, ಕನ್ನಡ ಕಲಿತು ಮಾತಾಡ್ತಿದ್ದಳು. ಅದೊಂದು ದಿನ ಅಪ್ಪ, ಅಮ್ಮನಿಗೆ ಬಹಳ ಪರಿಚಿತರಾಗಿದ್ದ ದಂಪತಿ ಮನೆಗೆ ಬಂದಿದ್ದರು.

ಕೆಲ ಹೊತ್ತು ಮಾತುಕತೆ, ತಿಂಡಿ, ಉಪಚಾರ



ಎಲ್ಲಾ ಮುಗಿದ ಮೇಲೆ ವಾಪಸ್ಸು ಮನೆಗೆ ಹೊರಡಲು ನಿಂತರು. ಸ್ವಲ್ಪ ಸಂಜೆಯಾಗಿದ್ದರಿಂದ ಹೋಗುವುದು ಹೇಗೆ ಎನ್ನುವ ಬಗ್ಗೆ ಮಾತುಕತೆ ನಡೆದಿತ್ತು.

'ಆಟೋರಿಕ್ಷಾ ಎಲ್ಲಿ ಸಿಗುತ್ತೆ?' ಎಂದು ಕೇಳಿದಳು. ಇನ್ನೂ ಅಮ್ಮ ಉತ್ತರಿಸುವುದರೊಳಗೆ ಮಧು, 'ಅಯ್ಯ, ಅದಕ್ಕೇನು ಆಂಟಿ, ಇಲ್ಲೇ ಎರಡು ಹೆಜ್ಜೆ ನೆಗೆದು ಬಿದ್ರೆ ಸಾಕು... ಬೇಕಾದಷ್ಟು ಆಟೋರಿಕ್ಷಾ ಸಿಗುತ್ತೆ...' ಅಂದಿದ್ದೇ ತಡ ನೆಂಟರು ಗಾಬರಿಯಾದರು. ಕೂಡಲೇ ಅವರಮ್ಮ, 'ಮಿಸ್ಟೇಕ್ ಮಾಡ್ಕೋಬೇಡಿ, ಇಲ್ಲೇ ಎರಡ್ಹೆಜ್ಜೆ ಎಡವಿ ಬಿದ್ರೆ... ಅನ್ನೋಕೆ ಹೋಗಿ, ಹಾಗೆ ಅಂದಿದ್ದಾಳೆ. ಕನ್ನಡ ಇನ್ನೂ ಪೂರ್ತಿ ಬರಲ್ಲ ಅಲ್ವಾ? ಏನೊ ಪ್ರಯತ್ನ ಮಾಡ್ತಾ ಇದ್ದಾಳೆ' ಎಂದು ಸಮಾಧಾನ ಮಾಡಿದಳು. ದಂಪತಿ ಪೆಚ್ಚು ನಗೆ ನಗುತ್ತಾ, 'ಪಾಪ, ಕನ್ನಡ ಮಾತಾಡಬೇಕು ಅನ್ನೊ ಮನಸಿದೆಯಲ್ಲ ಅದು ಮುಖ್ಯ, ಇಲ್ಲೇ ಇದ್ದುಕೊಂಡು ಕನ್ನಡ ಮರೀತಾ ಇರೋರು ಎಷ್ಟೊಂದು ಜನ ಇದ್ದಾರೆ ಅಲ್ವಾ?' ಎನ್ನುತ್ತ ಆಚೆ ನಡೆದರು.

**ಸುಮನಾ**

## ನಂಬಿಕೆ...

ಪರಮೇಶಿಗೆ ಅರ್ಜೆಂಟಾಗಿ ಖರ್ಚಿಗೆ ದುಡ್ಡು ಬೇಕಾಗಿತ್ತು. ಆ ದಿನ ಭಗವಂತನಿಗೆ, 'ಹೇ ಭಗವಂತಾ... ನಿನ್ನ ಕೃಪೆಯಿಂದ ನನಗೆ ಒಂದು ಸಾವಿರ ರೂಪಾಯಿ ದೊರೆತರೆ ಅದರಲ್ಲಿ ಅರ್ಧ ಪಾಲು, ಅಂದರೆ ಐನೂರು ರೂಪಾಯಿ ನಿನಗೇ ಅರ್ಪಿಸುವೆ' ಎಂದು ಕಳಕಳಿಯಿಂದ ಕೇಳಿಕೊಂಡ. ಕಾಕತಾಳೀಯ ಎಂಬಂತೆ ಕೆಲ ನಿಮಿಷಗಳ ತರುವಾಯ ಆತ ಹೋಗುತ್ತಿದ್ದ ದಾರಿಯಲ್ಲಿ ಐನೂರು ರೂಪಾಯಿಯ ಹೊಸ ನೋಟು ಬಿದ್ದಿರುವುದನ್ನು ಕಂಡವ ಫಕ್ಕನೆ ಎತ್ತಿಕೊಳ್ಳುತ್ತ ಮತ್ತೆ ಭಗವಂತನಿಗೆ 'ಇದೇನು ಭಗವಂತಾ... ನಾನೇನು ಅಷ್ಟು ನಂಬಿಕೆಗೆ ಅನರ್ಹನಾದೆನೆ? ನಿನ್ನ ಪಾಲನ್ನೂ ಮುರಿದುಕೊಂಡು ದಯಪಾಲಿಸಿರುವೆಯಲ್ಲಾ' ಎನ್ನುತ್ತಲೇ ಜೇಬಿಗಿಳಿಸಿ ಮುಂದೆ ಸಾಗಿದ.

**ಅರವಿಂದ ಜಿ. ಜೋಷಿ**

